ಕಥೆ

ಆಟೋದಿಂದ ಕೆಳಕ್ಕೆ ಜಂಪ್ ಮಾಡಿದ. ಏರು ಪೇರಿನ ಬೂಟುಗಳಿಂದಾಗಿ ಬ್ಯಾಲೆನ್ಸ್ ತಪ್ಪಿ ಬಿದ್ದ. ಆರಂಭದಲ್ಲಿ ಬರಿಗಾಲಿನಿಂದ ಕಸದ ಗುಡ್ಡೆಯೇರಿ ಕಸ ತುಂಬುತ್ತಿದ್ದದ್ದನ್ನು ನೋಡಿ ಡ್ರೈವರಣ್ಣ ಎರಡು ಬೂಟು ಹೊಂದಿಸಿಕೊಟ್ಟಿದ್ದ. ಒಂದು ಚಿಕ್ಕದು ಇನ್ನೊಂದು ದೊಡ್ಡದು. ದೊಡ್ಡ ಬೂಟಿನ ಹಿಮ್ಮಡಿ ಒಳಗೆ ಹಳೇ ಬಟ್ಟೆಯನ್ನು ತುರುಕಿ ಬಿಗಿ ಮಾಡಿಕೊಂಡಿದ್ದ. ಮಂಡಿವರೆಗೆ ಕಸ ಅಂಟುವುದನ್ನು ಅವು ತಪ್ಪಿಸಿದ್ದವು. ರಕ್ಷಣೆ ಕೊಟ್ಟ ಬೂಟುಗಳು ಇವು. ತನಗೇನು ಪೆಟ್ಟಾಗಿಲ್ಲ ಅಂತ ಸಮಾಧಾನ ಮಾಡಿಕೊಂಡು, ಯಾರಾದರೂ ನೋಡಿಯಾರು, ತಾನು ಬಿದ್ದೇ ಇಲ್ಲದವನಂತೆ ಮೇಲೆದ್ದು, ಇನ್ನೂ ಆಟೋದಲ್ಲಿ ಕೂತಿದ್ದ ಡ್ರೈವರಣ್ಣನ ಬಳಿಗೆ ಬಂದ. ಡ್ರೈವರ್ ನಾಗಲಿಂಗಣ್ಣ ಇಂಜಿನ್ ಆಫ್ ಮಾಡಿ ಮೊಬೈಲಿನಲ್ಲಿ ಮುಳುಗಿ ಹೋಗಿದ್ದ. ಮಾದೇವ ಮೆಲ್ಲಗೆ 'ಅಣ್ಣ' ಅಂದ. ಅವನು ತಿರುಗಿ ನೋಡುವುದಿರಲಿ, ಕಿವಿಯನ್ನೂ ಇತ್ತ ತಿರುಗಿಸಲಿಲ್ಲ. ಡ್ರೈವರಣ್ಣ ಈಪಾಟಿ ಬಿಜಿಯಾಗಿದ್ದಾಗ ಮಾತನಾಡಬಾರದೆಂಬ ತಿಳಿವಳಿಕೆ ಬಂದಿದ್ದರಿಂದ ಮತ್ತೆ ದನಿಯೇರಿಸಿ ಕೂಗಲಿಲ್ಲ.

ಕಸ ಹೊತ್ತು ಸಾಗಬೇಕಾದ ಲಾರಿಗಳು ಇನ್ನೂ ಬಂದಿರಲಿಲ್ಲ. ಅವು ಬಂದ ಮೇಲೆಯೇ ತಮ್ಮ ಆಟೋವನ್ನು ಅನ್‌ಲೋಡ್ ಮಾಡಿ ಡ್ರೈವರಣ್ಣನ ಸುಪರ್ದಿಗೆ ಒಪ್ಪಿಸುವುದು. ಆ ಮೇಲೆ ಮೇಸ್ತ್ರಿ ಬರುವುದು. ಹಂಗಾಗಿ ಅತ್ತಇತ್ತ ಕತ್ತಾಡಿಸಿ ಕಸ ತುಂಬಿ ನಿಂತಿದ್ದ ಆಟೋಗಳ ಕಡೆಗೆ ಹೆಜ್ಜೆ ಹಾಕತೊಡಗಿದ. ಒಂದೊಂದು ಆಟೋವೂ ಕಸದ ಚೀಲಗಳಿಂದ ತುಂಬಿ ತುಳುಕುತ್ತಿದ್ದವು. ಗೋಣಿತಾಟು, ಪ್ಲಾಸ್ಟಿಕ್ ಕವರು, ಹಾಸಿಗೆ ತುಂಡು, ಮುರಿದ ಚಾಪೆ, ಹರಕಲು ರಗ್ಗು, ಬಟ್ಟೆ ಚೂರು, ತರಕಾರಿ, ತಿಂಡಿ, ಸೊಪ್ಪುಸೊದೆಗಳ, ತಂಗಳಗಳ ಕೊಳೆತ ಪದಾರ್ಥಗಳು... ಹಂಗೆ ನೋಡಿದರೆ ಇವತ್ತು ತಮ್ಮ ಆಟೋ ಹಿಂಬದಿಯಲ್ಲಿ ಕೊಂಚ ತಾವು ಉಳಿದಿತ್ತು. ಆಟೋ ಹೊರಡುವ ಸಮಯಕ್ಕೆ ಎರಡ್ಮೂರು ಮಂದಿ ತಂದ ಕಸದ ಚೀಲಗಳನ್ನು ಹಾಕಿಕೊಳ್ಳಬಹುದಿತ್ತು. ಆದರೆ ಡ್ರೈವರಣ್ಣ ಹೇಳಿದರೆ ಒಪ್ಪಲಿಲ್ಲ. 'ಹಂಗಾದ್ರೆ ನಾಳೆಯಿಂದ ಕಸ ಬಾಚೋ ಕೆಲಸ ಇರಂಗಿಲ್ವಾ? ಬಾರೊ ಸುಮ್ನೆ. ದಿನ ದಿನಾ ಇದು ಏರ್ತಾನೆ ಇರುತ್ತದೆ ಕಂತೆ' ಅಂತ ಗದರಿಸಿಬಿಟ್ಟಿದ್ದ. ಕಸ ಹಾಕಲು ಬಂದ ಕೆಲವರು ತಮ್ಮನ್ನು ಕನಿಷ್ಠವಾಗಿ ಕಾಣುತ್ತಿದ್ದರು. ಈ ಮಂದಿ ದಿಕ್ಕು ದೆಸೆ ಇಲ್ಲದ ದರ್ಬೇಶಿಗಳು- ಇವರು ಇರೋದೇ ನಾವು ಹಾಕೋ ಕಸ ಬಾಚೋದಿಕ್ಕೆ ಅಂತ ಅವರೆಲ್ಲ ತಿಳಿದಂಗದೆ. ಆಗಲಿ, ಒಂದು ದಿನ ಕಸ ಬಾಚೋದು ನಿಲ್ಲಿಸಿದರೆ ಆಗ ಮುಖಮೂತಿ ಬಿಟ್ಕೊಂಡು ಓಡಾಡಲಿ ಮತ್ತೆ? ಅದಕ್ಕೆ ಇರಬೇಕು ಏಳೆಂಟು ವರ್ಷದಿಂದ ಈ ಚಾಕರಿ ಮಾಡುತ್ತಿರೋ ಡ್ರೈವರಣ್ಣ ಇವರ ಧಿಮಾಕು ಕಂಡರೆ ಬುಸುಗುಟ್ಟುತ್ತಿರುತ್ತಾನೆ.

ಮಾದೇವ ಮನದಲ್ಲಿ ಇರುವನ್ನು ಮರೆಯುತ್ತಾ, ನೆನಪನ್ನು ಕೆದಕುತ್ತಾ ಹೆಜ್ಜೆ ಹಾಕುತ್ತಿದ್ದವನಿಗೆ ಮೂಲೆಯೊಂದರಲ್ಲಿ ಆಟೋಗೆ ಒರಗಿಕೊಂಡು ನಿಂತಿದ್ದ ಹುಡುಗ ಕಣ್ಣಿಗೆ ಬಿದ್ದ. ಈಗ ದಿಟವಾಗಿ ಮಾದೇವನಿಗೆ ಯಾರಾದರೊಬ್ಬರು ಬೇಕಾಗಿತ್ತು. ಅವನ ಬಳಿ ಬಂದ. ಅಲ್ಲಿ ನಿಂತಿದ್ದ ಹುಡುಗ

